

ಪುಟ್ಟ ಭಾಷಣವನ್ನೇ ಮಾಡಿದ್ದ.

'ಅದು ಹಂಗಲ್ಲ ಸಾ, ಹೊಂಡ ತೋಡಿ ಅದಕ್ಕೆ ಕಲ್ಲು ಕಟ್ಟದೆ ಹಂಗೇ ಬುಟ್ಟು ಹೋದ್ರೆ ನೀರ್ ನಿಂತಾಗ ಕುಸ್ದು ಹೋಗದಿಲ್ವೆ... ಅತ್ಲಾಗೆ ಹೊಲನೂ ಇಲ್ಲ, ಇತ್ಲಾಗೆ ಹೊಂಡನೂ ಇಲ್ಲ ಅನ್ನಂಗೆ ಆಗಾದಿಲ್ವೆ' ಎಂದು ಹೆಡ್ಡಪ್ಪ ಗೊಣಗಾಡಿಕೊಂಡ.

ಹೆಡ್ಡಪ್ಪನನ್ನು ಮಣಿಸಬಹುದು ಎನಿಸಿತು ಅಧಿಕಾರಿಗೆ: 'ನಿಮಗ್ಯಾಕೆ ಗೌಡ್ರೆ, ಅಚ್ಚುಕಟ್ಟಾಗಿ ಕಟ್ಟಿಕೊಟ್ಟು ನೀರು ನಿಲ್ಲ ಹಂಗೆ ಮಾಡಿದ್ರೆ ಆಯ್ತಲ್ಲ, ಮಳೆಗಾಲ ಕಳೆದು ಮುಂದಿನ ಬೇಸಿಗೆ ವೇಳೆಗೆ ಡೀಸೆಲ್ ಮೋಟರ್ ತಂದು ಬೆಳೆಗೆ ನೀರು ಹೊಡ್ಕಳದು ಅಷ್ಟೆಯಾ... ಮೇಲಾಗಿ ನಿಮ್ಮ ಸಿಂದಿ ಹಸುಗಳ ನೀರಿಗೆ ಅಂತಾ ಕೆರೆ ಹಡ್ಲವರೆಗೂ ಎಳೆದಾಡುದು ತಪ್ಪುತ್ತಾ... ಅಲ್ಲಾ ನಾವೇನು ನಮ್ಮ ಲಾಭಕ್ಕೆ ಬಂದಿದೀವಾ... ನಿಮ್ಮಂತ ರೈತ್ರು ಸರ್ಕಾರದ ಯೋಜನೆಯ ಲಾಭ ಪಡ್ಕಂಡು ಉದ್ಧಾರ ಆಗ್ಲಿ ಅಂತ ಅಷ್ಟೇ... ಎಲ್ಲಿ ನಿಮ್ಮ ಒಪ್ಪಿಗೆಗೆ ಇಲ್ಲೊಂದು ಸೈನ್ ಹಾಕಿ. ನಾಳೆ ಬೆಳಗ್ಗೆನೇ ಜೆಸಿಬಿ ಬರುತ್ತೆ, ಹೊಂಡದ ಕೆಲ್ಸಕ್ಕೆ...' ಎಂದಿದ್ದ.

ಮನೆಗೆ ಬಂದ ಹೆಡ್ಡಪ್ಪನಿಗೆ ಹೆಂಡತಿಯನ್ನು ಎದುರಿಸಲು ಧೈರ್ಯ ಸಾಲಲಿಲ್ಲ.

ಆದರೆ, ವಿಚಾರ ಹೇಳಲೇಬೇಕಲ್ಲ, ಬೆಳಗಾಗೆದ್ದು ಜೆಸಿಬಿ ಬಂದೇ ಬಿಡುತ್ತದಲ್ಲ. ಹಾಗೆಯೇ ಹೊಂಚು ಹಾಕುತ್ತಾ ತಿರುಗಾಡಿದ. ರಾತ್ರಿ ಡೈರಿಗೆ ಹಾಲು ತೆಗೆದುಕೊಂಡು ಹೋದವನು ತಡ ಮಾಡಿಕೊಂಡು ಬಂದ. ಅಷ್ಟರಲ್ಲಿ ರಾಕೇಶ ನಗರದಿಂದ ಬಂದಿದ್ದ.

ಧೈರ್ಯ ತಂದುಕೊಂಡು ವಿಷಯ ಬಾಯಿಬಿಟ್ಟಿದ್ದ. 'ಅಯ್ಯೋ ಅಯ್ಯೋ ಅಂತೂ ಕಡಿಗೂ ಅವ್ರೆದುರಿಗೆ ಕೋಲೆಬಸವನಂಗೆ ತಲೆ ಆಡಿಸಿಯೇ ಬುಟ್ಟೆ. ಅದ್ಕೇ ಒಬ್ನೇ ಇದ್ದಾಗ ಬಂದು ನಿನ್ನ ಹಿಡ್ದು ಹಾಕಿರದು... ಏನಾರೂ ಮಾಡ್ಕಳಿ' ಎನ್ನುತ್ತಾ ಹೊನ್ನಮ್ಮ ಕೋಣೆ ಮನೆಗೂ, ಜಗುಲಿಗೂ ನೆಗೆದಾಡ ತೊಡಗಿದಳು.

'ಇರ್ಲಿ ತಡಿಯವ್ವ, ಅದೇನು ಪೂರ್ತಿ ಹೇಳಕೆ ಬುಡು' ಎಂದು ಅವ್ವನ ಮಾತು ತಡೆದು 'ಕಲ್ಲು ಕಟ್ಟಿ ಎಲ್ಲ ಅಚ್ಚುಕಟ್ಟು ಮಾಡಿಕೊಡ್ತಾರಂತ.. ಇಲ್ಲ ಅರ್ಧಂಬರ್ಧ ಮಾಡಿ ಓಡಿ ಹೋಗ್ತಾರಂತ, ನಿಗಂಟಾಗಿ ಕೇಳ್ದಾ ಹೆಂಗೆ?' ಎಂದು ರಾಕೇಶ ಅಪ್ಪನಿಗೆ ಕೇಳಿದ್ದ.

'ಎಲ್ಲಾ ಅಚ್ಚುಕಟ್ಟಾಗಿ ಮಾಡಿಕೊಟ್ಟು ಹೋಗ್ತಾರಂತೆ, ನೀರ್ ತುಂಬಿದ ಮೇಲೆ ನಾವು ಡೀಸಲ್ ಮೋಟರ್ ತಂದು ನೀರ್ ಹೊಡ್ಕಳದೇ ಬಾಕಿ ಅಂತ ಹೇಳಿದಾರೆ... ತರಕಾರಿ ಬೆಳೆ ಬೆಳೆದು ಲಕ್ಷಾಂತರ ಲಾಭ ಆದಾಗ ನನಗೆ ಕೊಡ್ತೀರಾ ಅಂದ್ರು... ಸರ್ಕಾರದ ಕಡೆಯ ಯೋಜನೆಯಿಂದ ಸಿಕ್ಕ ಲಾಭ ಯಾಕೆ ಬುಡುದು ಅಂತಾ ನಾನು ಸುಮ್ನೆ ಆದೆ' ಎಂದು ಹೆಡ್ಡಪ್ಪ ಹೆಂಡತಿ ಮಗನಿಗೆ ಸಮಜಾಯಿಸಿ ಹೇಳಿದ್ದ.

'ಅಷ್ಟೆಲ್ಲಾ ಮಾತಾಡಿ ಆಶ್ವಾಸನೆ ತಗಂಡಿದೀಯ ಅಂದ್ರೆ ಸರಿ ಬಿಡು...' ಎನ್ನುತ್ತಾ ಅಲ್ಲಿಂದ ಎದ್ದ ರಾಕೇಶ ದುಸುಗುಡುತ್ತಾ ಕೋಣೆ ಮನೆ ಹೋಗಿದ್ದ.

'ಸರಿ ಬಿಡವ್ವ ಅವರು ಅಷ್ಟು ಹೇಳದ್ಮೇಲೆ ಆಗ್ಲಿ... ಏನಾದ್ರೂ ಉದಾಸೀನ ಮಾಡಿದ್ರೆ ಅವ್ರ ಹಿಂದೆ ಬಿದ್ದು ಕೆಲ್ಸ ಮಾಡಿಸ್ಗಂಡ್ರೆ ಆಯ್ತು. ಸರ್ಕಾರದ ಕಡೆಯಿಂದ ಲಕ್ಷಾಂತರ ಆದಾಯ ಆಗುತ್ತೆ ಅಂದ್ರೆ ಯಾಕೆ ಬಿಡದು... ನಮ್ಮ ಬೇಕರಿ ಯೋಜನೆ ಬೇಗನೇ ಕೈಗೂಡುತ್ತೆ ಬಿಡು' ಎಂದು ಅವ್ವನಿಗೆ ಸಮಾಧಾನ ಹೇಳಿದ್ದ.

'ಆಯ್ತು ಬುಡು ಮಗಾ ಲಕ್ಷಾಂತರ ವರಮಾನ ಬಂದು ಮನೆ ಉದ್ದಾರಾಗುತ್ತೆ ಅಂದ್ರೆ ನಾನ್ಯಾಕೆ ಬ್ಯಾಡ ಅನ್ಲಿ, ಸರಿಯಾಗಿ ನಿಂತು ಕೆಲ್ಸ ಮಾಡಿಸ್ಕಳ್ಳಿ... ನಾನೂ ಕೈಲಾದ ನೆರವು ಕೊಡ್ತಿನಿ... ಆ ದೊಡ್ಡ ಹಸ ಇಂಜೆಕ್ಷನ್ ತಗಂಡಿತೆ.. ಬರ ಉಗಾದಿ ಹೊತ್ತಿಗೆ ಕರ ಹಾಕುತ್ತೆ. ಹೊತ್ತಿಗೆ ಎಂಟು ಲೀಟರ್ ಕೊಡುತ್ತೆ. ಆರೇಳು ತಿಂಗಳು ಕರಾವಲ್ಲಿ ಏನಿಲ್ಲಾ ಅಂದ್ರೂ ಎಂಭತ್ತು ಸಾವ್ರ ವರಮಾನ ಐತೆ. ನೀವು ಬೇಕರಿ ಮಾಡೊದಾದ್ರೆ ಅಷ್ಟನ್ನೂ ಉಳಿಸಿ ನಿಮ್ಮ ಕೈಗೇ ಕೊಡ್ತೀನಿ' ಎಂದು ಸಮಾಧಾನಗೊಂಡ ಹೊನ್ನಮ್ಮ ಹೇಳಿದ್ದಳು.

ಅವಳಿಗೆ ತನ್ನ ಗಂಡನದೇನೂ ತಪ್ಪಿಲ್ಲ ಎನಿಸಿ ಆ ಕ್ಷಣ ಅವನ ಬಗ್ಗೆ ಕನಿಕರ ಮೂಡಿತು.

'ಒಳ್ಳೆ ಕಾಡ್ ಮನುಷ್ಯರಂಗೆ ಆಗಿದಿಯಲ್ಲ. ನಿನ್ನ ಹರಕಲು ಬನೀನು ಚಡ್ಡಿ ನೋಡಿದ್ರೆ ಯಾರಾದ್ರೂ ಏನಾಂತಾರೆ ಅನ್ನದು ಬ್ಯಾಡ್ವಾ, ಆ ಸರ್ಕಾರದವ್ನ ಎದುರಿಗೆ ಇದೇ ಅವತಾರದಲ್ಲಿ ನಿಂತಿದ್ಯಾ. ಆ ನವೆದು ಹೋಗಿರ ಚಡ್ಡಿಲಿ ಜಡ್ ಬಂದಿರ ಅಂಡು ಅದೆಷ್ಟು ಅಸಹ್ಯವಾಗಿ ಕಾಣುತ್ತೆ. ದೇವರ ಗೂಡಲ್ಲಿ ಮುನ್ನೂರು ರೂಪಾಯಿ ದುಡ್ಡು ಇಟ್ಟಿದೀನಿ. ಅದ ತಗಂಡ್ ಹೋಗಿ ತಲೆ ಚೌರ ಮಾಡಿಸಿ, ಮಕ ಕೆತ್ತಿಸ್ಗಂಡು ಹಂಗೇ ಒಂದ್ ಚಡ್ಡಿ ಬನೀನು ತಗಬಾ' ಎಂದಿದ್ದಳು.